OS No. 75/2018
PW-2

**(ಇಂದು ದಿಃ 07-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.BSS ವಕೀಲರಿಂದಃ-</u>**

ದಾವಾ ಜಮೀನುಗಳ ಹಳೆ ಸರ್ವೆ ನಂಬರಗಳು ಮತ್ತು ಹೊಸ ಸರ್ವೆ ನಂಬರಗಳನ್ನು ಹೇಳಲು ಆಗುವುದಿಲ್ಲ, ದಾವಾ ಜಮೀನುಗಳು ಮೂಲತಃ ದೊಡ್ಡಪ್ಪನ ಹೆಸರಿನಲ್ಲಿದ್ದವು ಎಂದರೆ ಸರಿ. ದೊಡ್ಡಪ್ಪನಿಗೆ ದ್ಯಾವಮ್ಮ ಎಂಬ ಒಬ್ಬಳೆ ಮಗಳು ಇದ್ದಳು ಎಂದರೆ ಸರಿ. ದ್ಯಾವಮಮ್ಮಳ ಗಂಡನ ಹೆಸರು ಆಶಪ್ಪ ಎಂದರೆ ಸರಿ. ಆಶಪ್ಪ ಮತ್ತು ದ್ಯಾವಮ್ಮ ನವರಿಗೆ ಭೀಮಣ್ಣ ಮತ್ತು ನಾಗಪ್ಪ ಇಬ್ಬರು ಮಕ್ಕಳು ಎಂದರೆ ಸರಿ. ದೊಡ್ಡಪ್ಪ ತೀರಿಹೋದ ನಂತರ ಆತನ ಜಮೀನುಗಳು ದ್ಯಾವಮ್ಮಳ ಹೆಸರಿನಲ್ಲಿ ದಾಖಲಾದವು ಎಂದರೆ ಸರಿ. ದ್ಯಾವಮ್ಮ ಬದುಕಿರುವಾಗ ಎಲ್ಲಾ ಜಮೀನುಗಳನ್ನು ನಾಗಪ್ಪನ ಹೆಸರಿಗೆ ಮಾಡಿದಳು ಎಂದರೆ ಸರಿ. ದಾವಾ ಜಮೀನುಗಳಲ್ಲಿ ನಾಗಪ್ಪನ ಹೆಂಡತಿ ಮಕ್ಕಳು ಸ್ವಾಧಿನದಲ್ಲಿದಲ್ಲಿದ್ದಾರೆ ಎಂದರೆ ಸರಿ. ನಾಗಪ್ಪ ಹೊನ್ನನಾಯಕ ಮೂಲ ಪುರುಷ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ, ನಾಗಪ್ಪ ಮತ್ತು ಭೀಮಣ್ಣನ ನಡುವೆ ಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾಗಪ್ಪ ಮತ್ತು ಭೀಮಣ್ಣನ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ನಾನು ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**<u>ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರ ಶ್ರೀ.SRP ವಕೀಲರಿಂದಃ-</u>**

ದಾವಾ ಜಮೀನುಗಳ ಸರ್ವೆ ನಂಬರ, ವಿಸ್ತಿರ್ಣ, ಚೆಕಬಂದಿ ಮತ್ತು ಹಿಸ್ಸಾ ನನಗೆ ಗೊತ್ತಿಲ್ಲ, ದ್ಯಾವಮ್ಮ ಬದುಕಿರುವಾಗ ಶರಣಪ್ಪ ಮತ್ತು ಇತರರ ಹೆಸರಿಗೆ ಜಮೀನು ಮಾಡಿ ತೀರಿಹೋದಳು ಎಂದರೆ ಸರಿಯಲ್ಲ, ಶರಣಪ್ಪ ಇವತ್ತಿಗೂ ಜಮೀನುಗಳ ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ದಾವಾ ಜಮೀನುಗಳು ದ್ಯಾವಮ್ಮಳ ತವರು ಮನೆ ಸ್ವತ್ತುಗಳು ಆಗಿರುವ ಕಾರಣ ಅದರಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ನಾಗಪ್ಪನಿಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸರಿಯಲ್ಲ, ನನಗೆ ದಾವಾ ಸ್ವತ್ತುಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಕೂಡ ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**(7ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

OS No. 75/2018

PW-2